# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ.10/2019**

**ದೋ.ಸಾ. : 17 ಫ್ರಾ.ಸಾ. : 29**

| | | |
|---|---|---|
| ಸಾಕ್ಷಿಯ ಹೆಸರು | : | ಗಂಗಯ್ಯ ಹೊಸಮನಿ |
| ತಂದೆಯ ಹೆಸರು | : | ಗುರಯ್ಯ ಹೊಸಮನಿ |
| ವಯಸ್ಸು | : | 55 ವರ್ಷ |
| ಕೆಲಸ | : | ಕೂಲಿ ಕೆಲಸ |
| ವಾಸ | : | ಕಾರವಾರ |

**ದಿನಾಂಕಃ 13-08-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ:-**

1. ನಾನು ಕಳೆದ 20 ವರ್ಷಗಳಿಂದ ಕಾರವಾರದಲ್ಲಿ ಕೂಲಿ ಕೆಲಸ ಮಾಡುತ್ತಿದ್ದೇನೆ. 6 ವರ್ಷಗಳ ಹಿಂದೆ ಜನವರಿ ತಿಂಗಳಲ್ಲಿ ಪೊಲೀಸರು ಪಂಚನಾಮೆಗೆ ಬರುವಂತೆ ನೋಟೀಸ್ ನೀಡಿದ್ದು, ಅದರಂತೆ ನಾನು ಠಾಣೆಗೆ ಹೋದಾಗ, ಅಲ್ಲಿ 12.5 ಗ್ರಾಂ. ನ ಒಂದು ಬಂಗಾರದ ಚೈನನ್ನು ತೋರಿಸಿ, ಬರವಣಿಗೆ ಮಾಡಿ, ನನ್ನ ಹೆಬ್ಬೆಟ್ಟು ಗುರುತನ್ನು ಪಡೆದುಕೊಂಡರು. ಈಗ ನ್ಯಾಯಾಲಯದ ಮುಂದಿರುವ ಮುದ್ದೆಮಾಲು ನಂ.4 ಬಂಗಾರದ ಚೈನನ್ನು ನೋಡಿ, ಸಾಕ್ಷಿಯು ಗುರುತಿಸಿರುತ್ತಾರೆ. ಸಾಕ್ಷಿಯು ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-91 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಮಾನ್ಯ ಅಭಿಯೋಜಕರು ಅನುಮತಿಯನ್ನು ಕೇಳುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಗಮನಿಸಿ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಸರಕಾರಿ ಅಭಿಯೋಜಕರಿಂದಃ**

2. ದಿ.01-01-2019 ರಂದು ನನ್ನನ್ನು ಪೊಲೀಸರು ಠಾಣೆಗೆ ಕರೆಸಿದ್ದರು ಎಂದರೆ ಸರಿ. ಅಲ್ಲಿ ಮುದ್ದೆಮಾಲು ನಂ.4 ಚೈನನ್ನು ತೋರಿಸಿ, ಅದು ಮೃತ ಪ್ರೇಮ್ ಕುಮಾರನ ಚೈನು ಎಂದು ಹೇಳಿ, ಸದರಿ ಚೈನನ್ನು 3 ನೇ ಆರೋಪಿ ತೆಗೆದುಕೊಂಡು ಹೋಗಿದ್ದಾಗಿ ಹೇಳಿರುತ್ತಾರೆ

ಎಂದರೆ ಸರಿ. ಆ ಸಮಯದಲ್ಲಿ ಠಾಣೆಯಲ್ಲಿ ಹಾಜರಿದ್ದ ಚಾಸಾ-37 ರವರು, ಪೊಲೀಸರು ತೋರಿಸಿದ ಚೈನನ್ನು ಪರೀಕ್ಷಿಸಿ, ಅದು ಬಂಗಾರದ ಚೈನು ಎಂದು ಹಾಗೂ ಅದರ ತೂಕ 12.420 ಗ್ರಾಂ. ಇರುತ್ತದೆ ಎಂದು ತಿಳಿಸಿರುತ್ತಾರೆ ಎಂದರೆ ಸರಿ. ಪೊಲೀಸರು ಅಲ್ಲಿ ಸಂಜೆ 7.00 ರಿಂದ 7.45 ರವರೆಗೆ ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಎ.ಎ.ಎ. ವಕೀಲರಿಂದಃ-**

ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

**ಪಾಟೀ ಸವಾಲುಃ 2 ಮತ್ತು 3 ನೇ ಆರೋಪಿ ಪರ ಶ್ರೀ ಎಲ್.ಎಸ್.ಕೆ. ವಕೀಲರಿಂದಃ-**

3. ನನ್ನ ಮೂಲ ಊರು ನರಗುಂದ ತಾಲೂಕಿನ ಶಿರೋಳು ಆಗಿರುತ್ತದೆ. ಪೊಲೀಸರು ನನಗೆ ಪಂಚನಾಮೆಗೆ ಬರುವಂತೆ ನೋಟಿಸ್ ನೀಡಿದ್ದರು. ಆ ಸಮಯದಲ್ಲಿ ನಾನು ಬಿಣಗಾದ ಸೀತಾ ನಗರದಲ್ಲಿ ಇದ್ದೆನು. ಪಂಚನಾಮೆಗೆ ನನ್ನನ್ನು ಕರೆದಿದ್ದ ಪೊಲೀಸರ ಹೆಸರು ನನಗೆ ಗೊತ್ತಿಲ್ಲ. ಅದಕ್ಕಿಂತ ಮೊದಲು ಯಾವುದೇ ಪೊಲೀಸರ ಪರಿಚಯ ನನಗೆ ಇರುವುದಿಲ್ಲ. ಪೊಲೀಸ್ ಠಾಣೆಯಿಂದ ಸೀತಾ ನಗರಕ್ಕೆ ಸುಮಾರು 5 ಕಿ.ಮೀ. ದೂರ ಆಗುತ್ತದೆ. ಪೊಲೀಸರು ನನ್ನನ್ನು ಠಾಣೆಗೆ ಕರೆದಾಗ, ಯಾವ ವಿಷಯಕ್ಕೆ ಕರೆಸಿದ್ದರು ಎಂದು ನನಗೆ ಹೇಳಿರುವುದಿಲ್ಲ. ಪೊಲೀಸರು ಅದು ಯಾರ ಚೈನು ಎಂದು ನನಗೆ ಹೇಳಿರುವುದಿಲ್ಲ. ಚೈನನ್ನು ನನ್ನ ಮುಂದೆ ತೂಕ ಮಾಡಿರುವುದಿಲ್ಲ. ಬಂಗಾರದ ಚೈನನ್ನು ಚಾಸಾ-37 ರವರು ನನ್ನ ಮುಂದೆಯೇ ಪರೀಕ್ಷಿಸಿರುತ್ತಾರೆ ಹಾಗೂ ತಕ್ಕಡಿಯಿಂದ ತೂಕ ಮಾಡಿರುತ್ತಾರೆ. ಯಾವ ರೀತಿ ಪರೀಕ್ಷೆ ಮಾಡಿರುತ್ತಾರೆ ಎಂದರೆ ಸಾಕ್ಷಿಯು ತಕ್ಕಡಿಯಲ್ಲಿಟ್ಟು ಪರೀಕ್ಷೆ ಮಾಡಿದರು ಎಂದು ನುಡಿಯುತ್ತಾರೆ. ತೂಕ ಮಾಡಿದಾಗ, 12.5 ಗ್ರಾಂ. ತೂಕವಿತ್ತು ಹಾಗೂ ತೂಕ ಮಾಡಲು ಸಣ್ಣ ಸಣ್ಣ ಕಲ್ಲುಗಳನ್ನು ತಂದಿದ್ದರು. ಪೊಲೀಸರು ಸಹಿ ಪಡೆದುಕೊಂಡಾಗ, ಅದರಲ್ಲಿ ಏನು ಬರೆದಿದ್ದರು ಎಂದು ಗೊತ್ತಿದೆಯಾ ಎಂದರೆ ಸಾಕ್ಷಿಯು, ನಾನು ಶಾಲೆ ಕಲಿತಿಲ್ಲವಾದ್ದರಿಂದ ಗೊತ್ತಿಲ್ಲ ಎಂದು ನುಡಿಯುತ್ತಾರೆ ಹಾಗೂ ಪೊಲೀಸರು ಅದರಲ್ಲಿ ಏನು ಬರೆದಿದ್ದರು ಎಂದು ಹೇಳಿರುವುದಿಲ್ಲ. 2018-19 ರಲ್ಲಿ ನಾನು ಕಾರವಾರದ ನಂದನಗದ್ದ ಮತ್ತು ಸುಂಕೇರಿಯಲ್ಲಿ ಕೂಲಿ ಕೆಲಸ ಮಾಡುತ್ತಿದ್ದೆ ಹಾಗೂ ಪೊಲೀಸರು ನನ್ನನ್ನು ಕರೆದ ದಿನ ಸಂಜೆ ನಾನು ಗಣಪತಿ ದೇವಸ್ಥಾನದ ಬಳಿ ಇರುವ ಮಾರ್ಕೆಟ್ ಹತ್ತಿರ ಇದ್ದೆನು. ಪೊಲೀಸರು ಠಾಣೆಗೆ ಕರೆಸಿ ಸಹಿ ಮಾಡಿದ್ದನ್ನು ಬಿಟ್ಟರೆ, ನನಗೆ ಬೇರೆ ಏನೂ ಗೊತ್ತಿಲ್ಲ ಎಂದರೆ ಸರಿ.

**<u>ಪಾಟೀ ಸವಾಲುಃ 4 ನೇ ಆರೋಪಿ ಪರ ಶ್ರೀ ಎನ್.ವಿ.ಎನ್. ವಕೀಲರಿಂದಃ-</u>**

ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

**<u>ಪಾಟೀ ಸವಾಲುಃ 5 ನೇ ಆರೋಪಿ ಪರ ಶ್ರೀ ಹೆಚ್.ಎಸ್.ಎಸ್. ವಕೀಲರಿಂದಃ-</u>**

ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

**<u>ಮರು ವಿಚಾರಣೆಃ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

Sd/-

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ